ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

**"ಕನ್ನಡ ಕಾಯಕ ವರ್ಷ ೨೦೨೦-೨೧"**

ಸಂಖ್ಯೆ: ಕಾಶಿಇ/ಶೈವಿ/154/ಎನ್ಎಸ್ಎಸ್/2020-21

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಶೇಷಾದ್ರಿ ರಸ್ತೆ,ಬೆಂಗಳೂರು-560001.
ದಿನಾಂಕ:25.01.2021.

## ಸುತ್ತೋಲೆ

ವಿಷಯ: ಬೋಧಕೇತರ ಸಿಬ್ಬಂದಿಗಳನ್ನು ಸಾಹಸ ಶಿಬಿರ ಕಾರ್ಯಕ್ರಮಕ್ಕೆ ನಿಯೋಜಿಸುವ ಬಗ್ಗೆ.

ಉಲ್ಲೇಖ: ರಾಷ್ಟ್ರೀಯ ಸೇವಾ ಯೋಜನಾ ಕೋಶ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಇವರ ಕಛೇರಿ ಪತ್ರ ಸಂಖ್ಯೆ.ಯುಸೇಇ/ರಾಸೇಯೋ/ಸಾಹಸ/2020-21/270 ದಿನಾಂಕ:02.01.2021

* * * * * *

ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಎನ್.ಎಸ್.ಎಸ್. ಘಟಕಗಳನ್ನು ಸ್ಥಾಪಿಸಿ ವಿವಿಧ ಕಾರ್ಯಕ್ರಮಗಳು/ಶಿಬಿರಗಳನ್ನು ನಡೆಸುತ್ತಿದ್ದು. ಇದರ ಮುಂದುವರಿದ ಭಾಗವಾಗಿ ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ವಿದ್ಯಾರ್ಥಿಗಳಿಗೆ ಹಾಗೂ ಎನ್.ಎಸ್.ಎಸ್ ಸ್ವಯಂ ಸೇವಕರಿಗೆ, ಸಾಹಸ ಚಟುವಟಿಕೆಗಳನ್ನು ಪರಿಚಯಿಸಿ, ಯುವಕರಲ್ಲಿ ಸಾಹಸ ಮನೋಬಾವವನ್ನು ತುಂಬುವ ನಿಟ್ಟಿನಲ್ಲಿ, ಕರ್ನಾಟಕ ರಾಜ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಷ್ಟ್ರೀಯ ಸೇವಾ ಯೋಜನಾ ಕೋಶ, ಕಾಲೇಜು ಶಿಕ್ಷಣ ಇಲಾಖೆ ಹಾಗೂ ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿ ಇವರ ಸಹಭಾಗಿತ್ವದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ವಿದ್ಯಾರ್ಥಿಗಳಿಗೆ ವಿವಿಧ ಸಾಹಸ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದ್ದು ಇದರಿಂದ ವಿದ್ಯಾರ್ಥಿಗಳು ಹೆಚ್ಚಿನ ಪ್ರಯೋಜನ ಪಡೆಯ ಬಹುದಾಗಿರುತ್ತದೆ.

ಸದರಿ ಶಿಬಿರಗಳು ಒಂದು ತಿಂಗಳಕಾಲ ವಿವಿಧ ದಿನಾಂಕಗಳಂದು/ಬ್ಯಾಚ್‌ಗಳಲ್ಲಿ ಬಾದಾಮಿ/ರಾಮನಗರ/ ಜೋಗ/ಅಯ್ಯನಕೆರೆ/ ವಾಣಿವಿಲಾಸ ಸಾಗರದಲ್ಲಿ ಆಯ್ದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಎನ್.ಎಸ್.ಎಸ್, ಕ್ರೀಡೆ ಹಾಗೂ ಇತರೆ ವಿದ್ಯಾರ್ಥಿಗಳಿಗೆ ಮೂರು ದಿನಗಳ ಸಾಹಸ ತರಬೇತಿ ಶಿಬಿರಗಳನ್ನು ಅಯೋಜಿಸಲಾಗುತ್ತಿದ್ದು. ಈ ಸಂಬಂಧ ಆಸಕ್ತ ಕಾಲೇಜುಗಳಿಂದ ಸಾಹಸ ಶಿಬಿರಕ್ಕೆ ಭಾಗವಹಿಸುವ ಆಸಕ್ತ **ಬೋಧಕೇತರ ಸಿಬ್ಬಂದಿಗಳ ಪಟ್ಟಿಯನ್ನು** (ಪ್ರತಿ ಕಾಲೇಜಿಗೆ ಒಬ್ಬರಿಗೆ ಮಾತ್ರ) ಅಗತ್ಯ ಮಾಹಿತಿಯೊಂದಿಗೆ ನಿಗದಿತ ನಮೂನೆಯಲ್ಲಿ ದಿನಾಂಕ: 29.01.2021ರ ಸಂಜೆ 5:00 ಘಂಟೆಯೊಳಗಾಗಿ ಈ ಕಛೇರಿಯ ಇ-ಮೇಲ್ ವಿಳಾಸ: dcekar.sports@gmail.comಗೆ ಕಳುಹಿಸುವಂತೆ ಪ್ರಾಂಶುಪಾಲರಿಗೆ ಸೂಚಿಸಲಾಗಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ:

1. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ, ಗುಲಬರ್ಗಾ - ತಮ್ಮ ವ್ಯಾಪ್ತಿಗೆ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ರವಾನಿಸಲು ಸೂಚಿಸಲಾಗಿದೆ.

ಪ್ರತಿಯನ್ನು:

1. ಡಾ. ಗಣನಾಥ ಶೆಟ್ಟಿ, ರಾಜ್ಯ ಎನ್.ಎಸ್.ಅಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ರಾ.ಸೇ.ಯೋ. ಕೋಶ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಶ್ರೀ ಆರ್. ಶ್ರೀಕಾಂತ್, ನೋಡಲ್ ಅಧಿಕಾರಿ, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು.
3. ಶ್ರೀ ಶ್ರೀನಿವಾಸ ಜಿ, ನೋಡಲ್ ಅಧಿಕಾರಿ, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು.
4. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, (ವೆಬ್‌ಸೈಟ್‌ನಲ್ಲಿ ಪ್ರಕಟಿಸಲು)
5. ಕಛೇರಿ ಪ್ರತಿ.

ನಮೂನೆ

**College Letter head**

ಸಾಹಸ ಶಿಬಿರ:

| ಕ್ರಮ ಸಂಖ್ಯೆ | ಬೋಧಕೇತರ ಸಿಬ್ಬಂದಿಯ ಹೆಸರು ಮತ್ತು ಪದನಾಮ ಶ್ರೀ / ಶ್ರೀಮತಿ | ತಂದೆ ಹೆಸರು | ಜನ್ಮ ದಿನಾಂಕ | ಆಧಾರ್ ಸಂಖ್ಯೆ | ದೂರವಾಣಿ ಸಂಖ್ಯೆ |
|---|---|---|---|---|---|
| 1 | | | | | |

ಪ್ರಾಂಶುಪಾಲರ ಸಹಿ
ಮೊಬೈಲ್ ನಂ: